# *ಕನ್ನಡ ಪುಸ್ತಕೋದ್ಯಮದ ಅಧೋಗತಿ* *

**ಎಂ. ಎಸ್. ಶ್ರೀಧರ್**

**ಸಾರಾಂಶ:** ಕನ್ನಡ ಪುಸ್ತಕೋದ್ಯಮವನ್ನು ದೇಶದ ಇತರ ಭಾಷೆಗಳ ಪುಸ್ತಕೋದ್ಯಮಗಳಿಗೆ ಹೋಲಿಸಿದಲ್ಲಿ ದೊರಕುವ ಚಿತ್ರ ನಿರಾಶಾದಾಯಕವಾಗಿದೆ. ದೇಶದ ಶೇ ೧೦ ರಷ್ಟು ಪ್ರಕಾಶಕರು ಕರ್ನಾಟಕದಲ್ಲಿದ್ದಾಗಲೂ ತಮಿಳು, ಹಿಂದಿ, ಬಂಗಾಳಿ, ಮರಾಠಿ, ತೆಲುಗು, ಮಲಯಾಳ, ಇತ್ಯಾದಿ ಭಾಷೆಗಳ ಸಿಂಹ ಪಾಲಿನ ನಂತರ ಉಳಿದ ಶೇ ೨೨ ಕ್ಕೆ ಕನ್ನಡದ ಕೊಡುಗೆ ಶೇ೨.೬ ರಷ್ಟು ಮಾತ್ರ. ಸಮಸ್ಯೆಯ ಮೂಲ ಪುಸ್ತಕೋದ್ಯಮದಲ್ಲೇ ಇದ್ದು, ಓದುಗರನ್ನು ದೂರುವುದು ಅರ್ಥಹೀನ. ಹೆಚ್ಚಿನ ಪ್ರಕಾಶಕರಲ್ಲಿ ಪೂರ್ಣ ಪ್ರಮಾಣದ ಪ್ರಕಾಶನ ವ್ಯವಸ್ಥೆ, ಮಾರಾಟ ಜಾಲ, ಪ್ರಕಟಣಾ ಸಾಮರ್ಥ್ಯವಿಲ್ಲ ಮತ್ತು ಇಂತಹವರ ಪ್ರಕಟಣೆಗಳು ವಾರ್ಷಿಕ ಹತ್ತನ್ನೂ ಮೀರುವುದಿಲ್ಲ. ಸರ್ಕಾರದ ಸಗಟು ಖರೀದಿಯನ್ನೇ ಮೂಲೋದ್ದೇಶವನ್ನಾಗಿಸಿಕೊಂಡ ಇವರು ಮತ್ತು ಪ್ರಕಾಶಕರ ಪಾತ್ರವನ್ನೂ ನಿರ್ವಹಿಸುತ್ತಿರುವ ದ್ವಿಪಾತ್ರದಾರಿ ಲೇಖಕರು ಪುಸ್ತಕಗಳ ಪ್ರಚಾರ, ವಿತರಣೆ ಮತ್ತು ಮಾರಾಟಗಳೆಡೆಗೆ ಗಮನ ನೀಡದೆ ಬಹಳಷ್ಟು ಪ್ರಕಟಣೆಗಳು ಓದುಗರ ಗಮನಕ್ಕೆ ಬಾರದೇ ಹೋಗುವ ಸಾಧ್ಯತೆಯೇ ಹೆಚ್ಚು. ಹೀಗಾಗಿ ಪ್ರತಿಷ್ಠಿತ ಪ್ರಕಾಶಕರ ಸಂಖ್ಯೆ ಕಡಿಮೆ. ಪುಸ್ತಕಗಳ ವೈಜ್ಞಾನಿಕ ಬೆಲೆ ನಿರ್ಧಾರ, ಪ್ರಕಾಶಕರ ಸಹಕಾರ ಸಂಘ, ಇತ್ಯಾದಿಗಳೊಂದಿಗೆ ಓದುಗ–ಮಾರುಕಟ್ಟೆಯನ್ನು ಇತರ ಅಲಂಕಾರಿಕ ವಸ್ತುಗಳಂತೆ ವಿಸ್ತೃತ ಪ್ರಚಾರ, ಪುಸ್ತಕ ಪ್ರದರ್ಶನಗಳೊಂದಿಗೆ ಗ್ರಾಮೀಣ ಪ್ರದೇಶಗಳಿಗೂ ತಲುಪಿಸುವ ವ್ಯವಸ್ಥೆ ಮಾಡಿ, ಸುಭದ್ರ ಮಾರುಕಟ್ಟೆಯನ್ನು ರೂಪಿಸಿಕೊಂಡು ಮಾರಾಟಗಾರರಿಗೆ ಸಮರ್ಪಕ ಸೋಡಿಯೊಂದಿಗೆ ಉತ್ತೇಜನ ನೀಡಿ ಭರದಿಂದ ಮಾರುಕಟ್ಟೆಯನ್ನು ವ್ಯಾಪಿಸಿಕೊಳ್ಳದಿದ್ದಲ್ಲಿ ಕರ್ನಾಟದೊಳಗೇ ಕನ್ನಡ ಪುಸ್ತಕಗಳ ಮಾರಾಟ ಅಸಮರ್ಪಕವಾಗಿ, ಹೊರ ರಾಜ್ಯಗಳಲ್ಲಿ ಕನ್ನಡ ಪುಸ್ತಕಗಳ ಮಾರಾಟ ಕಲ್ಪನಾತೀತವಾಗುತ್ತದೆ.

**ಸೂಚಿಪದಗಳು:** ಕನ್ನಡ ಪುಸ್ತಕೋದ್ಯಮ, ಪ್ರಕಾಶಕರು, ಪುಸ್ತಕ ಮಾರಾಟ

ಕಳೆದ ಹತ್ತಾರು ವರ್ಷಗಳಿಂದ ಸರ್ಕಾರದ ಗ್ರಂಥಾಲಯ, ವಿದ್ಯಾ ಮತ್ತು ಭಾಷಾ ಇಲಾಖೆಗಳಿಂದ ಮತ್ತು ಪುಸ್ತಕ ಪ್ರಾಧಿಕರದಿಂದ ಅವ್ಯಾಹತವಾಗಿ ನಡೆದಿರುವ ಪುಸ್ತಕಗಳ ಸಗಟು ಖರೀದಿ, ಕನ್ನಡ ಪುಸ್ತಕಗಳ ಪ್ರಕಟಣೆ, ಮಾರಾಟ ಮತ್ತು ಉದ್ಯಮದ ಬೆಳವಣಿಗೆಗೆ ಬಹಳ ಸಹಕಾರಿಯಾಗಿದೆ ಎಂದು ನಂಬಲಾಗಿದೆ. ಈ ಕೇಂದ್ರೀಕೃತ ಸಗಟು ಖರೀದಿ ಕ್ರಮ ಪುಸ್ತಕೋದ್ಯಮ ಮತ್ತು ಗ್ರಂಥಾಲಯಗಳೆರಡಕ್ಕೂ ಕಾಲಕ್ರಮದಲ್ಲಿ ಹಾನಿಕಾರಕವೆಂದರೆ ಮೇಲ್ನೋಟಕ್ಕೆ ನೇತ್ಯಾತ್ಮಕ ಧೋರಣೆಯಾಗಿ ಕಾಣುತ್ತದೆ. ಈ ವಿಷಯದ ಚರ್ಚೆಗೆ ಮುನ್ನ ಪುಸ್ತಕೋದ್ಯಮದ ಕೆಲವು ಅಂಕಿಅಂಶಗಳನ್ನು ಗಮನಿಸುವುದು ಸೂಕ್ತ.

| *ಪುಸ್ತಕ ಪ್ರಕಟಣೆ (ವಾರ್ಷಿಕ)* | | |
|---|---|---|
| | *ಸಂಖ್ಯೆ* | *ಶೇ.* |
| *ಅಸ್ಸಾಮಿ* | 1019 | 1.78 |
| *ಬಂಗಾಳಿ* | 4286 | 7.47 |
| *ಇಂಗ್ಲೀಷ್* | 12528 | 21.83 |
| *ಗುಜರಾತಿ* | 2462 | 4.29 |
| *ಹಿಂದಿ* | 16026 | 27.93 |
| ***ಕನ್ನಡ*** | **1500** | **2.61** |
| *ಮಲಯಾಳ* | 2573 | 4.48 |
| *ಮರಾಠಿ* | 4259 | 7.42 |
| *ಒರಿಯ* | 597 | 1.04 |
| *ಪಂಜಾಬಿ* | 1024 | 1.78 |
| *ಸಂಸ್ಕೃತ* | 585 | 1.02 |
| *ತಮಿಳು* | 5879 | 10.24 |
| *ತೆಲುಗು* | 2687 | 4.68 |
| *ಉರ್ದು* | 1626 | 2.83 |
| *ಕಾಶ್ಮೀರಿ* | 85 | 0.15 |
| *ದೋಗ್ರಿ* | 54 | 0.09 |
| *ಕೊಂಕಣಿ* | 84 | 0.15 |
| *ಸಿಂಧಿ* | 112 | 0.20 |
| ***ಒಟ್ಟು*** | **57386** | **100.00** |

***ಕನ್ನಡ ಪುಸ್ತಕೋದ್ಯಮ :*** ರಾಷ್ಟ್ರ ಮಟ್ಟದಲ್ಲಿ ಪುಸ್ತಕೋದ್ಯಮ ಅರವತ್ತರ ದಶಕದಿಂದ ಭಾರಿ ಇಳಿಮುಖದಲ್ಲಿ ಸಾಗಿ ೯೦ರ ದಶಕದ ಅಂತ್ಯದಲ್ಲಿ ಚೇತರಿಸಿಕೊಂಡು ಪುಸ್ತಕ ಪ್ರಕಟಣೆಯಲ್ಲಿ ವಿಶ್ವದಲ್ಲಿ ೭ನೇ ಸ್ಥಾನದಲ್ಲಿದೆ ಎನ್ನುವುದು ಒಂದು ಅಂದಾಜು. ಇತ್ತೀಚಿನ ಅಧಿಕೃತ ಅಂದಾಜಿನಂತೆ ರಾಷ್ಟ್ರದಲ್ಲಿ ವರ್ಷಕ್ಕೆ ಸುಮಾರು ೨೨,೦೦೦ ಪುಸ್ತಕ/ಶೀರ್ಷಿಕೆಗಳು ಪ್ರಕಟವಾಗುತ್ತಿವೆ. ಆದರೆ ಪ್ರಕಾಶಕರ ಸಂಘಟನೆಗಳ ಅಂದಾಜಿನಂತೆ ದೇಶದಲ್ಲಿ ೧೮ ಭಾಷೆಗಳಲ್ಲಿ ವಾರ್ಷಿಕ ಸುಮಾರು ೫೭,೦೦೦ ಪುಸ್ತಕ/ಶೀರ್ಷಿಕೆಗಳು ಪ್ರಕಟಗೊಳ್ಳುತ್ತಿದ್ದು, ಅತಿ ಹೆಚ್ಚು ಪ್ರಕಟಣೆ (೧೬,೦೦೦) ಹಿಂದಿಯಲ್ಲಾಗಿದ್ದು, ಎರಡನೆ ಸ್ಥಾನವನ್ನು ಇಂಗ್ಲೀಷ್ (೧೨,೫೦೦) ಪಡೆದಿದೆ (ಪಟ್ಟಿ ನೋಡಿ). ಇಂಗ್ಲೀಷ್ ಪುಸ್ತಕಗಳ ಪ್ರಕಟಣೆಯಲ್ಲಿ ಭಾರತ ವಿಶ್ವದಲ್ಲೇ (ಅಮೇರಿಕ ಮತ್ತು ಬ್ರಿಟನ್ ನಂತರ) ಮೂರನೆ ಸ್ಥಾನದಲ್ಲಿದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಒಟ್ಟು ಪ್ರಕಟಿತ ಪುಸ್ತಕಗಳ ಶೀರ್ಷಿಕೆಗಳಲ್ಲಿ ಶೇ. ೨೫ರಷ್ಟು ದೆಹಲಿ ನಗರದಿಂದಲೇ ಹೊರಬೀಳುತ್ತಲಿವೆ ಎನ್ನುವುದೂ ಗಮನಾರ್ಹ. ಪ್ರಾದೇಶಿಕ ಭಾಷೆಗಳ ಪೈಕಿ ಅತಿ ಹೆಚ್ಚು ಅಂದರೆ

೫೮೭೯ ಶೀರ್ಷಿಕೆ ಪ್ರಕಟಿಸುತ್ತಿರುವ ಹೆಮ್ಮೆ ತಮಿಳಿನದ್ದಾಗಿದೆ. ಬಂಗಾಳಿ ಮತ್ತು ಮರಾಠಿಯಲ್ಲಿ ೪೦೦೦ ಕ್ಕೂ ಹೆಚ್ಚು ಪ್ರಕಟಣೆಗಳನ್ನು ತರಲಾಗುತ್ತಿದೆ. ತೆಲುಗು, ಮಲಯಾಳ ಮತ್ತು ಗುಜರಾತಿ ಭಾಷೆಗಳಲ್ಲಿ ಕೂಡ ವಾರ್ಷಿಕ ಸುಮಾರು ೨೫೦೦ ಪ್ರಕಟಣೆಗಳಿವೆ. ನಂತರದ ಸ್ಥಾನದಲ್ಲಿ ಉರ್ದು ಇದ್ದು ತದನಂತರದ ಸ್ಥಾನದಲ್ಲಿ (ನಿಖರವಾದ ಅಂಕಿ ಅಂಶಗಳೂ ಇಲ್ಲದೆ) ಸುಮಾರು ೧೫೦೦ ಶೀರ್ಷಿಕೆಗಳನ್ನು ಪ್ರಕಟಿಸುವ 'ಸೌಭಾಗ್ಯ' ಕನ್ನಡದ್ದು. ಅಂದರೆ ರಾಷ್ಟ್ರದ ಒಟ್ಟು ಪುಸ್ತಕ ಪ್ರಕಟಣೆಯಲ್ಲಿ ಇಂಗ್ಲೀಷ್ ಮತ್ತು ಹಿಂದಿ ಶೇ. ೪೦ ರಷ್ಟು ಇದ್ದರೆ, ತಮಿಳು ಶೇ. ೧೦ ರಷ್ಟು ಇದ್ದು (ಈ ಮೂರೂ ಭಾಷೆಗಳು ಅರ್ಧದಷ್ಟನ್ನು ಪ್ರಕಟಿಸಿದರೆ), ಮರಾಠಿ ಮತ್ತು ಬಂಗಾಳಿ ಸೇರಿ ಶೇ. ೧೫ ರಷ್ಟು, ಗುಜರಾತಿ, ಮಲಯಾಳಿ ಮತ್ತು ತೆಲುಗು ಸೇರಿ ಶೇ. ೧೩ ರಷ್ಟು ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಇನ್ನು ಉಳಿದ ಶೇ. ೨೨ ರ ಪೈಕಿ ಶೇ. ೨.೬ರ ಕೊಡುಗೆ ಕನ್ನಡದ್ದಾಗಿದೆ. ಅಷ್ಟಕ್ಕೆ ನಾವು ತೃಪ್ತಿ ಪಟ್ಟುಕೊಳ್ಳಬೇಕು. ಇನ್ನು ವಾರ್ಷಿಕ ಬಿಡುಗಡೆ ಮಾಡುವ ಸುಮಾರು ೧೫ ಲಕ್ಷ ಕನ್ನಡ ಪುಸ್ತಕಗಳ ಪ್ರತಿಗಳು ದೇಶದ ಮಾರುಕಟ್ಟೆಗೆ ಬರುವ ನೂರಾರು ಕೋಟಿ ಪ್ರತಿಗಳಿಗೆ ಹೋಲಿಸಿದರೆ ಅತ್ಯಲ್ಪ ಮತ್ತು ಲೆಕ್ಕಕ್ಕೆ ಇಲ್ಲದಂತಾಗುತ್ತವೆ. ಇತ್ತೀಚೆಗೆ ಒಂದು ತಿಂಗಳಲ್ಲಿ ಮಾರಾಟವಾದ ೮೦ ಲಕ್ಷ ಹ್ಯಾರಿ ಪಾಟರ್ ಪುಸ್ತಕದ ಪ್ರತಿಗಳಿಗೆ ಹೋಲಿಸಿದರೆ ಕನ್ನಡದ ಎಲ್ಲಾ ಪುಸ್ತಕಗಳ ಎಲ್ಲಾ ಪ್ರತಿಗಳೂ ಸೇರಿದರೂ ಇದರ ೧/೫ ರಷ್ಟಾಗುವುದು ದುಸ್ತರ.

***ಕನ್ನಡ ಪುಸ್ತಕೋದ್ಯಮದ ಕೆಲವು ಕಟು ಸತ್ಯಗಳು***

- *ಕನ್ನಡ ಪುಸ್ತಕೋದ್ಯಮ ಪೂರ್ಣವಾಗಿ ಸಗಟು ಖರೀದಿ ಮತ್ತು ಗ್ರಂಥಾಲಯಗಳ ಖರೀದಿಯನ್ನೇ ಅವಲಂಬಿಸಿದೆ.*
- *ಪ್ರಾದೇಶಿಕ ಭಾಷಾ (ಕನ್ನಡ) ಪುಸ್ತಕೋದ್ಯಮ ವ್ಯಾವಹಾರಿಕವಾಗಿ ಅಷ್ಟೇನೂ ಲಾಭದಾಯಕವಲ್ಲ.*
- *ಚಿಲ್ಲರೆ ಮರಾಟಗಾರರು ಪಠ್ಯೇತರ ಪುಸ್ತಕಗಳನ್ನು ಮಾರಾಟ ಮಾಡಲು ಮುಂದೆ ಬರುವುದಿಲ್ಲ ಮತ್ತು ಅವರಿಗೆ ಅದರಲ್ಲಿ ಲಾಭ ದೊರೆಯುವ ಸಾಧ್ಯತೆಗಳು ತುಂಬಾ ಕಡಿಮೆ.*
- *ಓದುಗರು ಪುಸ್ತಕ ಕೊಳ್ಳುವುದರಿಂದ ಮತ್ತು ಓದುವುದರಿಂದಲೇ ಒಂದು ಪುಸ್ತಕದ ಯಶಸ್ಸಿನ ನಿರ್ಣಯವಾಗಬೇಕು (ಸಗಟು ಖರೀದಿಯಿಂದಲ್ಲ).*
- *ಪುಸ್ತಕಗಳು ಜೀವನದ ಅತ್ಯಾವಶ್ಯಕ ಸರಕುಗಳಲ್ಲಿ ಸೇರಿಲ್ಲವಾಗಿ ಪುಸ್ತಕ ಮಾರಾಟಕ್ಕೆ ಹೆಚ್ಚಿನ ಒತ್ತಾಯಪೂರ್ವಕ ಪ್ರಚಾರ ಅವಶ್ಯಕ.*
- *ಪ್ರಬಲವಾದ ಇಂಗ್ಲೀಷ್ ಮಾಧ್ಯಮ ವಿದ್ಯಾಭ್ಯಾಸ ಕನ್ನಡ ಪುಸ್ತಕೋದ್ಯಮಕ್ಕೆ ಒಂದು ತೊಡಕು.*
- *ಓದುವ ಹವ್ಯಾಸ, ಓದುಗರ ಅಭಿರುಚಿ ಮತ್ತು ಆದ್ಯತೆಗಳ ಬಗ್ಗೆ ಸಮರ್ಪಕ ಅಧ್ಯಯನ ನಡೆದಿಲ್ಲವಾಗಿ ವ್ಯಾಪಕ ತಪ್ಪು ತಿಳುವಳಿಕೆ ಇದೆ .*

ರಾಷ್ಟ್ರದಲ್ಲಿ ಸುಮಾರು ೧೧,೨೦೦ ಪ್ರಕಾಶಕರು ಮತ್ತು ೫ ಲಕ್ಷ ಪುಸ್ತಕ ಮಾರಾಟಗಾರರಿದ್ದಾರೆ. ಪ್ರಕಾಶಕರ ಪೈಕಿ ಸುಮಾರು ೩,೦೦೦ ಪ್ರಕಾಶಕರು ಮಾತ್ರ ಕಾರ್ಯಪ್ರವೃತ್ತರು. ಸುಮಾರು ೧,೩೦೦ ಲೇಖಕ–ಪ್ರಕಾಶಕರು, ೧,೦೦೦ ಸರ್ಕಾರಿ ಪ್ರಕಾಶನ ಸಂಸ್ಥೆಗಳು ಮತ್ತು ೪೦೦ ಕ್ಕೂ ಹೆಚ್ಚು ಸಾರ್ವಜನಿಕ ಉದ್ದಿಮೆಗಳು ಇದರಲ್ಲಿ ಸೇರಿದ್ದಾರೆ. ಕಾರ್ಯಪ್ರವೃತ್ತ ಪ್ರಕಾಶಕರಲ್ಲಿ ಸುಮಾರು ೧೦೦ ಪ್ರಕಾಶಕರು ಮಾತ್ರ ವರ್ಷಕ್ಕೆ ೫೦ ಕ್ಕಿಂತ ಹೆಚ್ಚು ಪುಸ್ತಕ ಪ್ರಕಟಿಸಿದರೆ, ಸುಮಾರು ೨,೭೦೦ ಪ್ರಕಾಶಕರು ಕೇವಲ ೧೦ ಅಥವ ಅದಕ್ಕಿಂತ ಕಡಿಮೆ ಪುಸ್ತಕಗಳನ್ನು ಪ್ರಕಟಿಸುತ್ತಾರೆ. ಈ ಮಧ್ಯದ ಅಂದರೆ ವಾರ್ಷಿಕ ೧೦ ರಿಂದ ೫೦ ಪುಸ್ತಕ ಪ್ರಕಟಿಸುವ ಪ್ರಕಾಶಕರು ಸುಮಾರು ೨೦೦ ಇದ್ದಾರೆ. ಅಂದರೆ ಸುಮಾರು ೧೫೦ ಪ್ರಕಾಶಕರನ್ನು ಪೂರ್ಣ ಪ್ರಮಾಣದ ಪ್ರಕಾಶನ ವ್ಯವಸ್ಥೆ (infrastrucure) ಹೊಂದಿರುವ ಪ್ರಕಾಶಕರೆನ್ನಬಹುದು.

*ಕರ್ನಾಟಕದಲ್ಲಿ ದೇಶದ ಶೇ. ೧೦ ರಷ್ಟು ಪ್ರಕಾಶಕರಿದ್ದು, ದೇಶದಲ್ಲಿ ಪ್ರಕಟಿಸುವ ಶೇ ೨.೬ ರಷ್ಟು (ಕನ್ನಡ) ಪುಸ್ತಕಗಳನ್ನು ಮಾತ್ರ ಪ್ರಕಟಿಸುತ್ತಿರುವುದು ವಿಷಾದದ ಸಂಗತಿ. ಸರ್ಕಾರದ ಸಗಟು ಖರೀದಿ ವ್ಯವಸ್ಥೆ ಇಲ್ಲದಿದ್ದಲ್ಲಿ ಈ ರೀತಿಯ ಅತಂತ್ರ ಮತ್ತು ದುರ್ಬಲ ಪ್ರಕಾಶಕರ ಸಂಖ್ಯೆ ಸಾಕಷ್ಟು ಕಡಿಮೆ ಇರುತ್ತಿತ್ತು.*

ಕನ್ನಡದಲ್ಲಿ ಇದುವರೆವಿಗೆ ಸುಮಾರು ೧ ಲಕ್ಷ ಪುಸ್ತಕಗಳು ಪ್ರಕಟವಾಗಿರುವ ಅಂದಾಜಿದೆ. ರಾಜ್ಯದಲ್ಲಿ ಗುರುತಿಸಿರುವ ಕನ್ನಡ ಪುಸ್ತಕಗಳ ಪ್ರಕಾಶಕರ ಸಂಖ್ಯೆಯೇ ೧,೧೦೦ ಇದ್ದು, ಇದರಲ್ಲಿ ಶೇ ೬೦ ರಷ್ಟು ದ್ವಿಪಾತ್ರಧಾರಿಗಳು. ಅಂದರೆ ಲೇಖಕ–ಪ್ರಕಾಶಕ, ಪುಸ್ತಕ ಮಾರಾಟಗಾರ–ಪ್ರಕಾಶಕ, ಲೇಖನ ಸಾಮಗ್ರಿ ಮಾರಾಟಗಾರ–ಪ್ರಕಾಶಕ, ಅಧ್ಯಾಪಕ–ಪ್ರಕಾಶಕ, ಇತ್ಯಾದಿ. ಕನ್ನಡದಲ್ಲಿ ಸುಮಾರು ೫೦ ಪೂರ್ಣ ಪ್ರಮಾಣದ ಕಾರ್ಯ ನಿರತ ಪ್ರಕಾಶಕರಿರಬಹುದು. ಕನ್ನಡ ಪ್ರಕಾಶಕರ ಪೈಕಿ ಸುಮಾರು ೫೦೦ ಪ್ರಕಾಶಕರು ಬೆಂಗಳೂರಿನಲ್ಲೇ ಇದ್ದಾರೆ. ನಂತರದ ಸ್ಥಾನದಲ್ಲಿ ಧಾರವಾಡ ಮತ್ತು ಮೈಸೂರು ಸುಮಾರು ೧೦೦ ಪ್ರಕಾಶಕರನ್ನು ಹೊಂದಿವೆ. ಬಿಜಾಪುರ ಮತ್ತು ಮಂಗಳೂರಿನಲ್ಲಿ ಸುಮಾರು ೫೦ ಪ್ರಕಾಶಕರಿದ್ದು, ಉಳಿದವರು ಹರಿದು ಹಂಚಿದಂತಿದ್ದಾರೆ. ಬಹುತೇಕ ಪ್ರಕಾಶನ ಸಂಸ್ಥೆಗಳು ಸಣ್ಣ ಪ್ರಮಾಣದವಾಗಿದ್ದು ನಿಗದಿತ ಹಾಗೂ ಪೂರ್ಣ ಪ್ರಮಾಣದ ಪ್ರಕಾಶನ ವ್ಯವಸ್ಥೆ (infrastrucure) ಹೊಂದಿಲ್ಲದವು. ಇಂತಹ ಪ್ರಕಾಶಕರ ಪ್ರಕಟಣಾ ಪಟ್ಟಿಗಳು ದೊರೆಯುವುದಿಲ್ಲ. ಇನ್ನು ವರ್ಷಕ್ಕೆ ಎಷ್ಟು ಪುಸ್ತಕಗಳು ಪ್ರಕಟವಾಗುತ್ತವೆ ಮತ್ತು ಇದುವರೆಗೆ ಎಷ್ಟು

ಪ್ರಕಟಗೊಂಡಿವೆ ಎನ್ನುವುದು ಪರೋಕ್ಷ ಅಂದಾಜಿಗೆ ಬಿಟ್ಟಿದ್ದು. ಸುಮಾರು ೨೫೦ ಕೋಟಿ ರೂಪಾಯಿ ವ್ಯವಹಾರ ಇರುವ ಕರ್ನಾಟಕದ ಪುಸ್ತಕೋದ್ಯಮದಲ್ಲಿ ಪಠ್ಯೇತರ ಕನ್ನಡ ಪುಸ್ತಕಗಳ ಪಾಲು ೫ ಕೋಟಿ ಮೀರಲಾರದು.

ಕರ್ನಾಟಕದಲ್ಲಿ ದೇಶದ ಶೇ. ೧೦ ರಷ್ಟು ಪ್ರಕಾಶಕರಿದ್ದು, ದೇಶದಲ್ಲಿ ಪ್ರಕಟಿಸುವ ಶೇ ೨.೬ ರಷ್ಟು (ಕನ್ನಡ) ಪುಸ್ತಕಗಳನ್ನು  ಮಾತ್ರ ಪ್ರಕಟಿಸುತ್ತಿರುವುದು ವಿಷಾದದ ಸಂಗತಿ. ಸರಿಯಾದ ಪ್ರಚಾರ, ವಿತರಣೆ ಮತ್ತು ಮಾರಾಟದ ವ್ಯವಸ್ಥೆ ಇಲ್ಲದ ೧,೧೦೦ ಕ್ಕೂ ಹೆಚ್ಚು ಪ್ರಕಾಶಕರು ನಮ್ಮಲ್ಲಿ ಹೇಗೆ ಹುಟ್ಟಿದರು? ಇವರಲ್ಲಿ ಹೆಚ್ಚಿನವರು ವರ್ಷಕ್ಕೆ ಒಂದು ಪುಸ್ತಕವನ್ನೂ ಪ್ರಕಟಿಸದಿರುವಾಗ  ಇವರಿಂದ ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಯಾವ ಕೊಡುಗೆ ಸಾಧ್ಯ?  ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ.  ಸರ್ಕಾರದ  ಸಗಟು ಖರೀದಿ ವ್ಯವಸ್ಥೆ ಇಲ್ಲದಿದ್ದಲ್ಲಿ ಈ ರೀತಿಯ ಅತಂತ್ರ ಮತ್ತು  ದುರ್ಬಲ ಪ್ರಕಾಶಕರ ಸಂಖ್ಯೆ ಸಾಕಷ್ಟು ಕಡಿಮೆ ಇರುತ್ತಿತ್ತು ಎನ್ನುವುದು ಸ್ಪಷ್ಟ.

***ಪ್ರಚಾರ, ವಿತರಣೆ ಮತ್ತು ಮಾರಾಟದ ಔಚಿತ್ಯ :*** ಲೇಖಕರ ಪರಿಶ್ರಮ ಸಾರ್ಥಕಗೊಳಿಸಲು ಪುಸ್ತಕ ಪ್ರಕಟಗೊಂಡರೆ ಸಾಲದು, ಅದು  ಸಮರ್ಥ ಪ್ರಚಾರ, ವಿತರಣೆ ಮತ್ತು ಮಾರಾಟ ವ್ಯವಸ್ಥೆಯಡಿ ಶ್ರೀಸಾಮಾನ್ಯನಿಗೆ ಸುಲಭದಲ್ಲಿ ತಲುಪಬೇಕು. ದುರದೃಷ್ಟವಶಾತ್ ಕನ್ನಡ ಪುಸ್ತಕಗಳಿಗೆ ಒಳ್ಳೆಯ ವಿತರಣೆ ಮತ್ತು ಮಾರಾಟ ಜಾಲವೇ ಇಲ್ಲ. ನಗರಗಳಲ್ಲಿರುವ ಕೆಲವು ಮಾರಾಟಮಳಿಗೆಗಳು ಮತ್ತು ಯಾವಾಗಲಾದರೊಮ್ಮೆ ನಡೆಯುವ ಪುಸ್ತಕ ಪ್ರದರ್ಶನಗಳನ್ನು ಬಿಟ್ಟರೆ ಪುಸ್ತಕಗಳನ್ನು ಶ್ರೀಸಾಮಾನ್ಯನ ಹತ್ತಿರಕ್ಕೆ ಕೊಂಡೊಯ್ಯುವ ಕೆಲಸ ಸಮರ್ಪಕವಾಗಿ ನಡೆದಿಲ್ಲ. ಈ ನಿಟ್ಟಿನಲ್ಲಿ ಪುಸ್ತಕೋದ್ಯಮ ಬಹಳಷ್ಟು ಶ್ರಮಿಸಬೇಕಿದೆ. ಅಲ್ಪ ಸ್ವಲ್ಪ ಸಾಧನೆಯಾಗಿದ್ದರೆ ಅದು ಕೆಲವೇ ಕೆಲವು ಪ್ರತಿಷ್ಠಿತ ಖಾಸಗಿ ಪ್ರಕಾಶಕರಿಂದ ಮಾತ್ರ. ಸರ್ಕಾರದ ಸಗಟು ಖರೀದಿಯನ್ನೇ ಗಮನದಲ್ಲಿಟ್ಟುಕೊಂಡ ಹಲವಾರು ಏಕವ್ಯಕ್ತಿ ಪ್ರಕಾಶನಗಳು ಮತ್ತು ಸಣ್ಣ ಪ್ರಮಾಣದ ಪ್ರಕಾಶಕರಿಂದ ಓದುಗನ ಅವಶ್ಯಕತೆ ಮತ್ತು ಮಾರುಕಟ್ಟೆಯ ಬೇಡಿಕೆಯನ್ನು ಅರಿಯುವುದಾಗಲಿ, ಒಳ್ಳೆಯ ಗುಣಮಟ್ಟದ ಪುಸ್ತಕಗಳನ್ನಾಗಲಿ ಅಥವ ಸಮರ್ಥ ಪ್ರಚಾರ, ವಿತರಣೆ ಮತ್ತು ಮಾರಾಟವನ್ನಾಗಲೀ ನಿರೀಕ್ಷಿಸಲಾಗದು. ನೂರಾರು ಏಕವ್ಯಕ್ತಿ ಪ್ರಕಾಶನಗಳು ಕನಿಷ್ಠ ಒಂದು ಸಹಕಾರ ಸಂಘದಂತಹ ವ್ಯವಸ್ಥೆಯನ್ನೂ ಮಾಡಿಕೊಳ್ಳದೆ,  ಪುಸ್ತಕಗಳ ಬಗೆಗಿನ  ಮಾಹಿತಿಯನ್ನು ಪ್ರಚಾರ ಪಟ್ಟಿಗಳ  ಮೂಲಕ  ನಾಡಿನ  ಉದ್ದಗಲಕ್ಕೆ  ಪ್ರಸಾರ  ಮಾಡದೆ, ಅಂಚೆ ಮೂಲಕವಾದರೂ  ವ್ಯವಹರಿಸದೆ, ಓದುಗರನ್ನು ನೇರವಾಗಿ  ತಲುಪುವುದು ಅಸಾಧ್ಯ.  ಗ್ರಾಮಾಂತರ  ಓದುಗರಿಗೆ ಹೆಚ್ಚು  ಹೆಚ್ಚು  ಪುಸ್ತಕದ  ಅಂಗಡಿಗಳ  ಮತ್ತು ಪ್ರದರ್ಶನಗಳ ಅವಶ್ಯಕತೆ ಪೂರೈಸದೆ ಅವರು ಪುಸ್ತಕ ಕೊಳ್ಳುತ್ತಿಲ್ಲ ಎಂದು ದೂರುವುದು ಸರಿಯಲ್ಲ. ಒಟ್ಟಿನಲ್ಲಿ ಒಬ್ಬ ಶ್ರೀಸಾಮಾನ್ಯ, ಅದರಲ್ಲೂ ಗ್ರಾಮೀಣ ನಾಗರೀಕ, ಪುಸ್ತಕಗಳ ಇರುವಿಕೆಯ ಬಗ್ಗೆ ತಿಳಿಯಲು ಮತ್ತು ಪುಸ್ತಕಗಳನ್ನು ಪರಾಮರ್ಶಿಸಿ ಆರಿಸಿಕೊಳ್ಳಲು ಹೆಚ್ಚಿನ ಶ್ರಮ, ಕಾಲ ಮತ್ತು ಹಣ ವ್ಯಯ ಮಾಡದೆ ವಿಧಿಯಿಲ್ಲ. ಅಂಥಹ ಉತ್ಸುಕ ಶ್ರೀಸಾಮಾನ್ಯನಿಗೆ ನಗರಗಳಲ್ಲಿರುವ ಕೆಲವೇ ಕೆಲವು ಪುಸ್ತಕ ಮಾರಾಟಮಳಿಗೆಗಳಿಗೆ ಭೇಟಿ ಕೊಡಲಾಗದಾಗ ಅಂಚೆ ಮೂಲಕ ತರಿಸಿಕೊಳ್ಳುವುದೊಂದೆ ಮಾರ್ಗವಾಗಿ ಪುಸ್ತಕ ಮತ್ತು ಮಾರಾಟಗಾರರ ಹೆಚ್ಚಿನ ವಿವರವೂ ಇಲ್ಲದೆ ಪರದಾಟವಾಗುತ್ತದೆ. ಕನಿಷ್ಠ ಮಾಹಿತಿ ಇಲ್ಲದೆ ಪುಸ್ತಕದ ಉಪಯುಕ್ತತೆ ನಿರ್ಧರಿಸಿ ಆಯ್ಕೆ ಮಾಡುವುದು ಕಷ್ಟ, ಮೇಲಾಗಿ ಪುಸ್ತಕದ ಅಂಗಡಿಗಳು, ಪುಸ್ತಕ ಪ್ರದರ್ಶನಗಳು ಮತ್ತು ಪ್ರಚಾರಕ್ಕಾಗಿ ಮಾಧ್ಯಮಗಳ ಬಳಕೆ ತೀರ ಕಡಿಮೆ. ಒಟ್ಟಿನಲ್ಲಿ ಪುಸ್ತಕೋದ್ಯಮ (ಪ್ರಕಾಶಕ, ವಿತರಕ ಮತ್ತು ಮಾರಾಟಗಾರ) ಪುಸ್ತಕಗಳನ್ನು ಶ್ರೀಸಾಮಾನ್ಯನಿಗೆ ತಲುಪಿಸುವುದರಲ್ಲಿ ಅಷ್ಟೇನು ಯಶಸ್ವಿಯಾಗಿಲ್ಲ ಎಂದು ನಿರ್ಭಯವಾಗಿ ಹೇಳಬಹುದು.

> *ದುರದೃಷ್ಟವಶಾತ್ ಕನ್ನಡ ಪುಸ್ತಕಗಳಿಗೆ ಒಳ್ಳೆಯ ವಿತರಣೆ ಮತ್ತು ಮಾರಾಟ ಜಾಲವೇ ಇಲ್ಲ. ಅಲ್ಪ ಸ್ವಲ್ಪ ಸಾಧನೆಯಾಗಿದ್ದರೆ ಅದು ಕೆಲವೇ ಕೆಲವು ಪ್ರತಿಷ್ಠಿತ ಖಾಸಗಿ ಪ್ರಕಾಶಕರಿಂದ ಮಾತ್ರ.*

ಸಾವಿರಕ್ಕೂ ಮಿಗಿಲು ಇರುವ ಪ್ರಕಾಶಕರಲ್ಲಿ ಶೇ. ೯೦ಕ್ಕೂ ಹೆಚ್ಚು ಇರುವ ಅರೆಕಾಲಿಕ ಅಥವ ತಾತ್ಕಾಲಿಕ ದ್ವಿಪಾತ್ರಧಾರಿ {ಅಂದರೆ ಲೇಖಕ–ಪ್ರಕಶಕ, ಪುಸ್ತಕ ವ್ಯಾಪಾರಿ–ಪ್ರಕಾಶಕ, ಇತ್ಯಾದಿ} ಪ್ರಕಾಶಕರಿಗೆ ವೃತ್ತಿನಿರತ ಪ್ರಕಾಶಕರಿಗೆ ಸಾಧ್ಯವಾಗುವಂತಹ ಮಾರಾಟ ಮತ್ತು ವಿತರಣಾ ವ್ಯವಸ್ಥೆ ಸಾಧ್ಯವಾಗುವುದಿಲ್ಲ. ಮೇಲೆ ತಿಳಿಸಿದಂತೆ ತಮ್ಮದೇ ಆದ ಸಹಕಾರ ಸಂಘ ಕಟ್ಟಿಕೊಳ್ಳುವಲ್ಲಿ ಇವರು ಹಲವಾರು ವರ್ಷಗಳಿಂದ ವಿಫಲರಾಗಿದ್ದಾರೆ. ಆದ್ದರಿಂದ ನಾಯಿ ಕೊಡೆಗಳಂತೆ ಹುಟ್ಟಿಕೊಂಡಿರುವ ಪ್ರಕಾಶಕರಿಗೆ ಎಲ್ಲ ಪ್ರಕಟಣಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಒಂದು ಸಹಕಾರ ಸಂಘದ ಅಥವ ಸರ್ಕಾರದ ವ್ಯವಸ್ಥೆಯ ಅವಶ್ಯಕತೆ ಇದೆ (ಸಗಟು ಖರೀದಿಯೊಂದೇ ಗುರಿಯಲ್ಲದೆ ತಮ್ಮ ಪುಸ್ತಕಗಳನ್ನು ಓದುಗರಿಗೆ ನೇರವಾಗಿ  ತಲುಪಿಸಬೇಕೆಂಬ ಉದ್ದೇಶವಿದ್ದವರಿಗೆ ಮಾತ್ರ!).  ಪುಸ್ತಕೋದ್ಯಮದ ಬಹು ಮುಖ್ಯ ಅಂಗವಾದ ಪುಸ್ತಕಗಳ ಸಮರ್ಪಕ ವಿತರಣೆ ಮತ್ತು ಮಾರಾಟಕ್ಕಾಗಿ ಉದ್ಯಮ ಸರ್ಕಾರದ ಮತ್ತು ಪುಸ್ತಕ ಪ್ರಾಧಿಕಾರದ ಕಡೆ ನೋಡುತ್ತಲೇ ಇದೆ. ಕನ್ನಡ ಪುಸ್ತಕ ಕೊಳ್ಳುವವರಿಗೆ ಗ್ರಾಮಾಂತರ ಪ್ರದೇಶವಿರಲಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿಯೂ ಸಹ ಪುಸ್ತಕದ ಅಂಗಡಿಗಳು (ಪಠ್ಯ ಪುಸ್ತಕಗಳ ಅಂಗಡಿಗಳನ್ನು ಹೊರತುಪಡಿಸಿ) ಓದುಗರ

ಅವಶ್ಯಕತೆಗಳನ್ನು ಪೂರೈಸುತ್ತಿಲ್ಲ.

ಸರ್ಕಾರದ ಅಂಗ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ ಪಡೆದ ಪ್ರಕಾಶಕರು ಪ್ರಚಾರ, ವಿತರಣೆ ಮತ್ತು ಮಾರಾಟದ (marketing technique) ಮಹತ್ವವನ್ನೇ ಅರಿತಂತಿಲ್ಲ. ಇದನ್ನು ಒಂದು ಅನಾವಶ್ಯಕ ಲಾಭಕೋರ ಮಧ್ಯವರ್ತಿ ವ್ಯವಸ್ಥೆ ಎಂದು ತಪ್ಪಾಗಿ ಅರ್ಥೈಸಿ, ವಕ್ರ ದೃಷ್ಟಿಯಿಂದ ನೋಡುವ ಪರಿಪಾಠ ನಿಲ್ಲಿಸಿ ಅಂತಹ ವ್ಯವಸ್ಥೆಯನ್ನು ಆಧುನಿಕ ಪುಸ್ತಕೋದ್ಯಮದ ಆಡಳಿತ ಪರಿಕ್ರಮ ಎಂದು ಪರಿಗಣಿಸಬೇಕು. ಇಂತಹ ಸಾಂಸ್ಥಿಕ ಪ್ರಕಾಶಕರು ಸರ್ಕಾರದ ಸಹಾಯಧನದ ಆಧಾರದ ಮೇಲೆ ನಿಂತಿದ್ದು ಶುದ್ಧ ವ್ಯಾಪಾರ ದೃಷ್ಟಿಯಿಂದ ಸೋತಿವೆ. ಈ ಸಂಸ್ಥೆಗಳು ತಮ್ಮತಮ್ಮಲ್ಲೆ ಯಾವರೀತಿಯ ಹೊಂದಾಣಿಕೆಯನ್ನೂ ಮಾಡಿಕೊಳ್ಳದೆ, ಸರಿಯಾದ ಪ್ರಚಾರ, ವಿತರಣೆ ಮತ್ತು ಮಾರಾಟ ವ್ಯವಸ್ಥೆ ಇಲ್ಲದೆ ಪ್ರಕಟಿಸಿದ ಕಡಿಮೆ ಬೆಲೆಯ ಹಲವಾರು ಪುಸ್ತಕಗಳನ್ನು ಆಸಕ್ತ ಓದುಗರಿಗೆ ತಲುಪಿಸಲಾಗದೆ ಸಾವಿರಾರು ಪ್ರತಿಗಳು ಈ ಸಂಸ್ಥೆಗಳ ದಾಸ್ತಾನು ಮಳಿಗೆಗಳಲ್ಲಿ ಕೊಳೆಯುತ್ತಿವೆ. ಇಂತಹ ಸಂಸ್ಥೆಗಳು full cost pricing ಪದ್ಧತಿ ಅನುಸರಿಸಿ ಪುಸ್ತಕಗಳನ್ನು ಅವುಗಳ ನಿಜವಾದ ಬೆಲೆಗೆ ಮಾರದೆ, ವೈಜ್ಞಾನಿಕ ವಿತರಣೆ ಮತ್ತು ಮಾರಾಟ ವ್ಯವಸ್ಥೆಯನ್ನು ಅನುಸರಿಸದೆ ಕಡೆಗೆ ಪುಸ್ತಕೋದ್ಯಮಕ್ಕೆ ಮಾರಕವಾದರೆ ಆಶ್ಚರ್ಯವಿಲ್ಲ.

> *ಸರ್ಕಾರದ ಅಂಗ/ ಅನುದಾನ ಪಡೆದ ಪ್ರಕಾಶಕರು/ ಸಂಸ್ಥೆಗಳು ವೃತ್ತಿಪರತೆ ಪ್ರದರ್ಶಿಸದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿವೆ; ಪ್ರಚಾರ, ವಿತರಣೆ ಮತ್ತು ಮಾರಾಟದ (marketing technique) ಮಹತ್ವವನ್ನು ಕಡೆಗಣಿಸಿ ಅದನ್ನು ಒಂದು ಅನಾವಶ್ಯಕ ಲಾಭಕೋರ ಮಧ್ಯವರ್ತಿ ವ್ಯವಸ್ಥೆ ಎಂದು ತಪ್ಪಾಗಿ ಅರ್ಥೈಸಿ ವಕ್ರ ದೃಷ್ಟಿಯಿಂದ ನೋಡಿ ಆಧುನಿಕ ಪುಸ್ತಕೋದ್ಯಮದ ಆಡಳಿತ ಪರಿಕ್ರಮದ ಅಂಗವಾದ ವೈಜ್ಞಾನಿಕ ವಿತರಣೆ ಮತ್ತು ಮಾರಾಟ ವ್ಯವಸ್ಥೆಯನ್ನು ಮತ್ತು full cost pricing ಅನುಸರಿಸದೆ ಪುಸ್ತಕಗಳನ್ನು ಅವುಗಳ ನಿಜವಾದ ಬೆಲೆಗೆ ಮಾರದೆ, ಕಡೆಗೆ ಪುಸ್ತಕೋದ್ಯಮಕ್ಕೆ ಮಾರಕವಾದರೆ ಆಶ್ಚರ್ಯವಿಲ್ಲ.*

> *ತೀವ್ರ ಮತ್ತು ವಿಸ್ತೃತ ಪ್ರಚಾರ, ವಿತರಣೆ ಮತ್ತು ಮಾರಾಟ ಭರದಿಂದ ಹಳ್ಳಿ ಹಳ್ಳಿಗೂ ತಲುಪುವ ಅಲಂಕಾರಿಕ ವಸ್ತುಗಳು, ಮನೆಬಳಕೆ ಉಪಕರಣಗಳು, ಕೆಸೆಟ್ಟುಗಳು, ಪಾನೀಯಗಳು, ಮತ್ತಿತರ ಹಲವಾರು ಸರಕುಗಳಿಗೆ ರಾಜ್ಯಾದ್ಯಂತ ಸಾಧ್ಯವಾದ ವಿತರಣೆ ಮತ್ತು ಸುಭದ್ರ ಮಾರಾಟ ಜಾಲ ಕನ್ನಡ ಪುಸ್ತಕಗಳಿಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಪ್ರಚಾರ, ವಿತರಣೆ ಮತ್ತು ಮಾರಾಟದ (marketing technique) ಔಚಿತ್ಯ ಅರಿಯದ ವ್ಯವಸ್ಥೆಯಲ್ಲಿರುವ ನ್ಯೂನ್ಯತೆಗಳು ಮತ್ತು ಅಡಚಣೆಗಳೇ ಮುಖ್ಯ ಕಾರಣ. ಸರ್ಕಾರದ ಸಗಟು ಖರೀದಿ ಒಂದು ಸಬ್ಸಿಡಿ ವ್ಯವಸ್ಥೆಯಾಗಿ ಪ್ರಚಾರ, ವಿತರಣೆ ಮತ್ತು ಮಾರಾಟ ಜಾಲ ಬೆಳೆಯಲು ಅವಕಾಶವೇ ಆಗುತ್ತಿಲ್ಲ. ಪ್ರಕಟವಾದ ಪುಸ್ತಕಗಳಲ್ಲಿ ಶೇ. ೭೫ ರಷ್ಟು ಪ್ರತಿಗಳನ್ನು ಸಗಟು ಖರೀದಿ ಮೂಲಕ ಬೆಂಗಳೂರಿನಲ್ಲೇ ಮಾರಾಟ ಮಾಡಬಹುದಾದರೆ ಮಿಕ್ಕ ಶೇ. ೨೫ ರಷ್ಟು ಪ್ರತಿಗಳನ್ನು ಮಾರಲು ಪ್ರಕಾಶಕರು ಪ್ರಚಾರ, ವಿತರಣೆ ಮತ್ತು ಮಾರಾಟಕ್ಕೆ ಖರ್ಚು ಮಾಡಲು ಹೇಗೆ ಮುಂದಾದಾರು. ಬೇರೆ ಸರಕುಗಳಂತೆ ಪುಸ್ತಕಗಳಿಗೆ ಮುಖಬೆಲೆಯ ಶೇ ೫೦ ಕ್ಕಿಂತ ಹೆಚ್ಚು ಹಣವನ್ನು ಪ್ರಚಾರ, ವಿತರಣೆ ಮತ್ತು ಮಾರಾಟಕ್ಕಾಗಿ ವ್ಯಯಿಸುತ್ತಿಲ್ಲ.*

ಮೊದಲನೆಯದಾಗಿ ತೀವ್ರ ಮತ್ತು ವಿಸ್ತೃತ ಪ್ರಚಾರ, ವಿತರಣೆ ಮತ್ತು ಮಾರಾಟ ಭರದಿಂದ ಹಳ್ಳಿ ಹಳ್ಳಿಗೂ ತಲುಪುವ ಅಲಂಕಾರಿಕ ವಸ್ತುಗಳು, ಮನೆಬಳಕೆ ಉಪಕರಣಗಳು, ಕೆಸೆಟ್ಟುಗಳು, ಪಾನೀಯಗಳು, ಮತ್ತಿತರ ಹಲವಾರು ಸರಕುಗಳಿಗೆ ರಾಜ್ಯಾದ್ಯಂತ ಸಾಧ್ಯವಾದ ವಿತರಣೆ ಮತ್ತು ಸುಭದ್ರ ಮಾರಾಟ ಜಾಲ ಕನ್ನಡ ಪುಸ್ತಕಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ ಎಂಬುದೇನು ಯಕ್ಷಪ್ರಶ್ನೆಯಲ್ಲ. ಮೇಲ್ನೋಟಕ್ಕೆ ಓದುವ ಮತ್ತು ಪುಸ್ತಕ ಕೊಳ್ಳುವ ಹವ್ಯಾಸ ಕಡಿಮೆಯೆಂದು ಭಾವಿಸಬಹುದಾದರೂ ಪ್ರಚಾರ, ವಿತರಣೆ ಮತ್ತು ಮಾರಾಟದ (marketing technique) ಔಚಿತ್ಯ ಅರಿಯದ ವ್ಯವಸ್ಥೆಯಲ್ಲಿರುವ ನ್ಯೂನತೆಗಳು ಮತ್ತು ಅಡಚಣೆಗಳೇ ಮುಖ್ಯವಾದುವುಗಳು ಎನ್ನಿಸುತ್ತದೆ. ಬಹು ಮುಖ್ಯವಾಗಿ ಸರ್ಕಾರದ ಸಗಟು ಖರೀದಿ (ಸಾರ್ವಜನಿಕ ಗ್ರಂಥಾಲಯಗಳು, ವಯಸ್ಕರ ಶಿಕ್ಷಣ ಇಲಾಖೆ ಮತ್ತು ವಿದ್ಯಾ ಇಲಾಖೆ) ಒಂದು ಸಬ್ಸಿಡಿ ವ್ಯವಸ್ಥೆಯಾಗಿ ಪ್ರಚಾರ, ವಿತರಣೆ ಮತ್ತು ಮಾರಾಟ ಜಾಲ ಬೆಳೆಯಲು ಅವಕಾಶವೇ ಆಗುತ್ತಿಲ್ಲ. ಪ್ರಕಟವಾದ ಪುಸ್ತಕಗಳಲ್ಲಿ ಶೇ. ೭೫ ರಷ್ಟು ಪ್ರತಿಗಳನ್ನು ಸಗಟು ಖರೀದಿ ಮೂಲಕ ಬೆಂಗಳೂರಿನಲ್ಲೇ ಮಾರಾಟ ಮಾಡಬಹುದಾದರೆ ಮಿಕ್ಕ ಶೇ. ೨೫ ರಷ್ಟು ಪ್ರತಿಗಳ ಪ್ರಚಾರ, ವಿತರಣೆ ಮತ್ತು ಮಾರಾಟಕ್ಕೆ ಖರ್ಚು ಮಾಡಲು ಪ್ರಕಾಶಕರು ಹೇಗೆ ಮುಂದಾದಾರು? . ಅಂದರೆ ಚಿಲ್ಲರೆ ಮಾರಾಟಗಾರರು ಮತ್ತು ವಿತರಕರನ್ನು ಪ್ರಕಾಕಶಕರು ಮತ್ತು ಲೇಖಕರೇ ಪರ್ತ್ಯೇತರ ಕನ್ನಡ ಪುಸ್ತಕಗಳಿಂದ ದೂರವಿಟ್ಟಂತಾಯಿತು. ಹೀಗಾಗಿ ಕೇಂದ್ರೀಕೃತ ಸಗಟು ಖರೀದಿ ವ್ಯವಸ್ಥೆ ಮಾರಾಟ ಜಾಲದ ಬೆಳವಣಿಗೆಗೆ ಒಂದು ಕಂಟಕಪ್ರಾಯವಾಗಿ ಒದಗಿದೆ. ಬದಲಾಗಿ ಗ್ರಂಥಾಲಯಗಳು ಮತ್ತು ಸಂಸ್ಥೆಗಳು ಪುಸ್ತಕಗಳನ್ನು ಚಿಲ್ಲರೆಯಾಗಿ ಆಯಾ ಪ್ರದೇಶದ ಚಿಲ್ಲರೆ

ಮಾರಾಟಗಾರರಿಂದ ಕೊಳ್ಳುವುದರಿಂದ ವಿತರಣೆ ಮತ್ತು ಮಾರಾಟ ವ್ಯವಸ್ಥೆಯನ್ನು ರೂಪಿಸಲು ಒಂದು ಚಾಲನೆ ದೊರೆಯುತ್ತದೆ. ಈ ದೃಷ್ಟಿಯಿಂದ ಸಗಟು ಆಯ್ಕೆ ಮತ್ತು ಖರೀದಿಯನ್ನು ವಿಕೇಂದ್ರೀಕರಿಸುವುದು ಸೂಕ್ತ.

ಎರಡನೆಯದಾಗಿ, ಬೇರೆ ಸರಕುಗಳಂತೆ ಪುಸ್ತಕಗಳಿಗೆ ಮುಖಬೆಲೆಯ ಶೇ ೫೦ ಕ್ಕಿಂತ ಹೆಚ್ಚು ಹಣವನ್ನು ಪ್ರಚಾರ, ವಿತರಣೆ ಮತ್ತು ಮಾರಾಟಕ್ಕಾಗಿ ವ್ಯಯಿಸುತ್ತಿಲ್ಲ. ಕನ್ನಡ ಪುಸ್ತಕಗಳ ಸರಾಸರಿ ಮುಖಬೆಲೆ ತುಂಬ ಕಡಿಮೆ ಇದ್ದು ಪ್ಯಾಕಿಂಗ್, ಅಂಚೆ ಇತ್ಯಾದಿ ರವಾನೆಗೆ ತಗಲುವ ವೆಚ್ಚ ಮುಖಬೆಲೆಗೆ ಹೋಲಿಸಿದರೆ ತುಂಬಾ ಅಧಿಕವಾಗಿ, ಪುಸ್ತಕಗಳ ಬೆಲೆಯಲ್ಲಿ ದೊರೆಯುವ ಸೋಡಿ ಇದಕ್ಕೆ ಸಾಲದಾಗಿದೆ. ಕೊಳ್ಳುವವರು ಪುಸ್ತಕದ ಮುಖ ಬೆಲೆಗಿಂತ ಜಾಸ್ತಿ ತೆರುವುದಿಲ್ಲ. ಸ್ವಾಭಾವಿಕವಾಗಿ ಖಾಸಗಿ ಪ್ರಕಾಶಕರ ಪುಸ್ತಕಗಳ ಬೆಲೆ ಸರ್ಕಾರಿ ಅಂಗ ಸಂಸ್ಥೆಗಳು ಪ್ರಕಟಿಸುವ ಪುಸ್ತಕಗಳಿಗಿಂತ ಹೆಚ್ಚು ಇದ್ದು, ಕೆಲವರು ಹೊಸ ಹೊಸ ಮಾರಾಟದ ಮಾರ್ಗ ಮತ್ತು ಬಗೆಗಳನ್ನು ಅರಸಿ ಅನುಸರಿಸಿ ಓದುಗರನ್ನು ನೇರ ತಲುಪುವ ಪ್ರಯತ್ನದಲ್ಲಿದ್ದಾರೆ. ಉದಾಹರಣೆಗೆ ಸಾಲ ಸೌಲಭ್ಯ, ದಾನಿಗಳ ಸಹಾಯಧನ ಕಲ್ಪಿಸಿ ಕೊಡುವುದು, ಇತ್ಯಾದಿ.

*ಓದುವ ಹವ್ಯಾಸದ ಕೊರತೆಯನ್ನು ನೀಗಿಸಲು ಸರ್ಕಾರವೇ ಸಗಟು ಖರೀದಿಸುವುದಾಗಲೀ ಅಥವ ಕಡಿಮೆ ಬೆಲೆಗೆ ಮುದ್ರಿಸಿ ವಿತರಿಸುವುದಾಗಲಿ ಕೊಳ್ಳುವ ಮತ್ತು ಓದುವ ಹವ್ಯಾಸವನ್ನು ನೆಲೆಗೊಳಿಸಿ ವೃದ್ಧಿಸಲಾರವು. ಇದರಿಂದ ದುರ್ಬಲ ಮತ್ತು ತಾತ್ಕಾಲಿಕ ಪ್ರಕಾಶಕರ ಹಿಂಡನ್ನು ಸೃಷ್ಟಿಸಿ ಉದ್ಯಮಕ್ಕೆ 'ಕಳೆ' ಸೇರಿಸಿದಂತಾಗುತ್ತದೆ.*

ಮೂರನೆಯದಾಗಿ, ಈ ಮೊದಲೇ ತಿಳಿಸಿದಂತೆ, ಸರ್ಕಾರಿ ಅಂಗಸಂಸ್ಥೆ ಮತ್ತು ಅನುದಾನಿತ ಸಂಸ್ಥೆಗಳು ತಮ್ಮ ಪುಸ್ತಕಗಳ ಬೆಲೆಯ ನಿರ್ಣಯವನ್ನೇ ಸರಿಯಾಗಿ ಮಾಡದೆ, ಮಾರಾಟಗಾರರಿಗೆ ಸಮರ್ಪಕ ಸೋಡಿ ಕೊಡದಿರುವುದರಿಂದ ತಮ್ಮ ಪುಸ್ತಕಗಳನ್ನು ದಾಸ್ತಾನುಗಳಿಂದ ಮುಂದೆ ಕಳಿಸಲಾಗುತ್ತಿಲ್ಲ. ಇದರಿಂದ ವಿತರಕರು ಮತ್ತು ಚಿಲ್ಲರೆ ಮಾರಾಟಗಾರರಿಗೆ ಪ್ರೋತ್ಸಾಹವಿಲ್ಲ. ಬದಲಾಗಿ ಅವರನ್ನು ಲಾಭಕೋರರಂತೆ ನೋಡುವ ಪರಿಪಾಠವಿದೆ. ಈ ದೃಷ್ಟಿಯಿಂದ ಸರ್ಕಾರಿ ಅಂಗಸಂಸ್ಥೆಗಳು ಮತ್ತು ಅನುದಾನಿತ ಪ್ರಕಾಶಕರು ವೃತ್ತಿಪರತೆಯನ್ನು ಪ್ರದರ್ಶಿಸದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿವೆ ಎಂದರೆ ತಪ್ಪಾಗದು. ಇಂತಹ ಸಂಸ್ಥೆಗಳಿಗೆ ಪುಸ್ತಕ ಪ್ರಕಟಣೆಯಿಂದ ವ್ಯಾವಹಾರಿಕವಾಗಿ ಲಾಭ ಪಡೆಯಲಾಗುತ್ತಿಲ್ಲ ಮತ್ತು ಪುಸ್ತಕಗಳನ್ನು ಸುಲಭ ಬೆಲೆಗೆ ವಿತರಿಸುತ್ತಿರುವುದರಿಂದ ಸಾಕಷ್ಟು ಸಹಾಯಧನ ಪೋಲಾಗುತ್ತಿದೆ ಎಂಬ ಅಳುಕೂ ಇಲ್ಲ.

ಕೊನೆಯದಾಗಿ, ನಮ್ಮಲ್ಲಿ ಪುಸ್ತಕ ಕೊಳ್ಳುವ ಮತ್ತು ಓದುವ ಹವ್ಯಾಸ ಕಡಿಮೆ. ಪುಸ್ತಕಗಳು ವಿರಾಮೋದ್ಯಮದಲ್ಲಿ ಇತರ ಪರ್ಯಾಯ ಸರಕುಗಳಿಂದಾಗಿ ನಿಕೃಷ್ಟ ಸರಕುಗಳಾಗಿವೆ. ಪುಸ್ತಕಗಳಿಗೆ ಇತರ ಸರಕುಗಳಿಗೆ ಇರುವಂತೆ ಛಿಟಟಿಜಿಷಿಘಿದಿಜ಻ ಡಿಥಿತಿಠಿಜಿಟಿಣಖ ಇಲ್ಲ. ಕನ್ನಡ ಪುಸ್ತಕಗಳ *ಪ್ರಚಾರ, ವಿತರಣೆ ಮತ್ತು ಮಾರಾಟ ವ್ಯವಸ್ಥೆ ಕರ್ನಾಟಕದ ಒಳಗೇ ಇಷ್ಟೊಂದು ಅಸಮರ್ಪಕವಾಗಿರುವಾಗ ಕರ್ನಾಟಕದ ಹೊರಗೆ ಕನ್ನಡಪುಸ್ತಕಗಳ ಮಾರಾಟದ ಬಗ್ಗೆ ಕಲ್ಪಿಸಿಕೊಳ್ಳಲೂ ಆಗದು.*

*ಸಾರ್ವಜನಿಕ ಗ್ರಂಥಾಲಯಗಳು ಜನಸಂಖ್ಯೆಯ ಶೇ. ೧.೩೧ ರಷ್ಟು ಸದಸ್ಯತ್ವವನ್ನು ಹೊಂದಿವೆ ಮತ್ತು ಇವುಗಳ ಗ್ರಂಥಸಂಗ್ರಹಣೆಯ ಗುಣಮಟ್ಟವನ್ನು ಸರ್ವೇಕ್ಷಣೆಗಳು ನಿರ್ದಾಕ್ಷಿಣ್ಯವಾಗಿ ಕಳಪೆ ಎಂದು ಸಾರಿವೆ.*

***ಸಾರ್ವಜನಿಕ ಗ್ರಂಥಾಲಯಗಳ ಪಾತ್ರ :*** ಪುಸ್ತಕಗಳು ಶ್ರೀಸಾಮಾನ್ಯನನ್ನು ತಲುಪಲು ಬಹುಮುಖ್ಯ ವಾಹಿನಿಯಾಗಬೇಕಿದ್ದ ಸಾರ್ವಜನಿಕ ಗ್ರಂಥಾಲಯಗಳು ಈ ದಿಶೆಯಲ್ಲಿ ಯಾವ ಮಹತ್ತರ ಯೋಜನೆಯನ್ನೂ ಇಟ್ಟುಕೊಳ್ಳದೆ ಶೋಚನಿಯ ಸ್ಥಿತಿಯಲ್ಲಿವೆ. ಈ ಗ್ರಂಥಾಲಯಗಳು ಜನಸಂಖ್ಯೆಯ ಶೇ. ೧.೩೧ ರಷ್ಟು ಸದಸ್ಯತ್ವವನ್ನು ಹೊಂದಿವೆ ಮತ್ತು ಇವುಗಳ ಗ್ರಂಥಸಂಗ್ರಹಣೆಯ ಗುಣಮಟ್ಟವನ್ನು ಕಳಪೆ ಎಂದು ಸರ್ವೇಕ್ಷಣೆಗಳು ನಿರ್ದಾಕ್ಷಿಣ್ಯವಾಗಿ ಸಾರಿವೆ. ಸಾರ್ವಜನಿಕ ಗ್ರಂಥಾಲಯ ಇಲಾಖೆ ಶಾಖೆಗಳನ್ನು ಹೆಚ್ಚಿಸುವುದರ ಜೊತೆಗೆ ಸದಸ್ಯತ್ವವನ್ನೂ ಹೆಚ್ಚಿಸಬೇಕು ಮತ್ತು ಅತೀ ಮುಖ್ಯವಾಗಿ ಸಮಗ್ರ ಗ್ರಂಥ ಸಂಗ್ರಹಣೆಯ ಜವಾಬ್ದಾರಿಯನ್ನು ನಿಭಾಯಿಸಿ ಪುಸ್ತಕ ಸಂಗ್ರಹಣೆಯನ್ನು ಬಲಪಡಿಸಬೇಕು. ಈಗ ಪ್ರಚಲಿತವಿರುವ ಸಗಟು ಖರೀದಿ ಮಾರ್ಗವನ್ನು ಸಂಪೂರ್ಣ ಪರಿಷ್ಕರಿಸಿ, ಓದುಗರು ಮತ್ತು ಗ್ರಂಥಾಲಯ ಸಿಬ್ಬಂದಿ ಪುಸ್ತಕಗಳ ಆಯ್ಕೆಯ ಕಾರ್ಯದಲ್ಲಿ ಸಕ್ರಿಯ ಪಾತ್ರಧಾರಿಗಳಾಗಲು ಅನುವು ಮಾಡಿ, ಪ್ರಸ್ತುತ ಕಾಯಿದೆಯನ್ವಯ ಪ್ರಕಟಿತ ಪುಸ್ತಕಗಳ ಪ್ರತಿಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯ ಪಡೆದು ಕೊಳ್ಳಲು ಹಲವು ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಕನ್ನಡದಲ್ಲೆ ವ್ಯವಹರಿಸುವ ಹಾಗೂ ಕಲಿಯುವ ಗ್ರಾಮಾಂತರ ಪ್ರದೇಶಗಳಲ್ಲಿ ಓದಲು ಕನ್ನಡ ಪುಸ್ತಕಗಳು ಹೇರಳವಾಗಿ ದೊರೆಯುವಂತೆ ಮಾಡಬೇಕು.

ಎಲ್ಲಕ್ಕಿಂತ ಮಿಗಿಲಾಗಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಅಥವ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕಗಳ ಸಮಗ್ರ ಗ್ರಂಥಸೂಚಿಯೊಂದನ್ನು ನಿಯೋಜಿಸಿ ಕಂಪ್ಯೂಟರ್ ಅಥವ ಇಂಟರ್ನೆಟ್ ಜಾಲದಲ್ಲಿ ದೊರೆಯುವಂತೆ ಮಾಡುವುದರಿಂದ ಕನ್ನಡ ಪುಸ್ತಕಗಳ ಬಗೆಗಿನ ಮಾಹಿತಿ ಸುಲಭದಲ್ಲಿ ಎಲ್ಲರಿಗೂ ದೊರೆಯುವಂತಾಗುವುದಲ್ಲದೆ ಪುಸ್ತಕಗಳ ಮಾರಾಟಕ್ಕೆ ನೆರವಾದಂತಾಗುತ್ತದೆ.

***ಉಪಸಂಹಾರ :*** ಪುಸ್ತಕಗಳನ್ನು ಕೊಳ್ಳುವ ಮತ್ತು ಓದುವ ಹವ್ಯಾಸದ ಕೊರತೆಯನ್ನು ನೀಗಿಸಲು ಸರ್ಕಾರವೇ ಸಗಟು ಖರೀದಿಸುವುದಾಗಲೀ ಅಥವ ಕಡಿಮೆ ಬೆಲೆಗೆ ಮುದ್ರಿಸಿ ವಿತರಿಸುವುದಾಗಲೀ ಇವಾವುವೂ ಕೊಳ್ಳುವ ಮತ್ತು ಓದುವ ಹವ್ಯಾಸವನ್ನು ನೆಲೆಗೊಳಿಸಿ ವೃದ್ಧಿಸಲಾರವು. ಇದರಿಂದ ದುರ್ಬಲ ಮತ್ತು ತಾತ್ಕಾಲಿಕ ಪ್ರಕಾಶಕರ ಹಿಂಡನ್ನು ಸೃಷ್ಟಿಸಿ ಉದ್ಯಮಕ್ಕೆ 'ಕಳೆ' ಸೇರಿಸಿದಂತಾಗುತ್ತದೆ. ಅದರಿಂದಾಗಿಯೇ ದೇಶದ ಶೇ. ೧೦ ರಷ್ಟು ಪ್ರಕಾಶಕರು ಕರ್ನಾಟಕದಲ್ಲಿ ಉದ್ಭವಿಸಿ ಕೇವಲ ಶೇ. ೨.೬ ರಷ್ಟು ಪುಸ್ತಕಗಳನ್ನು/ ಶೀರ್ಷಿಕೆಗಳನ್ನು ಪ್ರಕಟಿಸುತ್ತಿದ್ದಾರೆ. ನೆರೆ ರಾಜ್ಯದಲ್ಲಿ ಪುಸ್ತಕಗಳನ್ನು ೫,೦೦೦ಕ್ಕೂ ಹೆಚ್ಚು ಪ್ರತಿ ಮುದ್ರಿಸಿ ಕಡಿಮೆ ಬೆಲೆಗೆ ಮಾರಿದರೆ, ಕನ್ನಡದಲ್ಲಿ ೧,೦೦೦ ಪ್ರತಿ ಮುದ್ರಿಸಿ ಪೂರ್ಣ ಮಾರಾಟ ಮಾಡಲಾಗದೆ ಸಗಟು ಖರೀದಿಗಷ್ಟೇ ಸೀಮಿತಗೊಳಿಸಿದೆ. ಅಂದರೆ ತಮಿಳಿನಲ್ಲಿ ಪ್ರತಿ ವರ್ಷ ಮಾರಾಟಕ್ಕೆ ಬಿಡುಗಡೆ ಮಾಡುವ ಪ್ರತಿಗಳ ಸಂಖ್ಯೆ ಸುಮಾರು ಮೂರು ಕೋಟಿ ಇದ್ದು (೫,೨೦೦ ಶೀಷಿಕೆಗಳ ೫,೦೦೦ ಪ್ರತಿಗಳು) ಅದು ಕನ್ನಡದಲ್ಲಿ ಮಾರಾಟಕ್ಕೆ ಬಿಡುಗಡೆಯಾಗುವ ಪ್ರತಿಗಳ (೧,೫೦೦ ಶೀರ್ಷಿಕೆಗಳ ೧,೦೦೦ ಪ್ರತಿಗಳು) ೨೦ ಪಟ್ಟು ಹೆಚ್ಚಿದೆ. ಮಾರುಕಟ್ಟೆಯ ಬೇಡಿಕೆ ಪುಸ್ತಕದ ಬೆಲೆ ನಿರ್ಧರಿಸುವ ಬದಲು, ಸರ್ಕಾರಿ ಸಂಸ್ಥೆಗಳು ಕನಿಷ್ಟದ ಖರ್ಚನ್ನೂ ನಿಭಾಯಿಸದೆ, ಸುಲಭ ಬೆಲೆ ನಿಗದಿಪಡಿಸುವುದರಿಂದ ಇತರ ವೃತ್ತಿಪರ ಪ್ರಕಾಶಕರ ಪ್ರಯತ್ನಕ್ಕೆ ತೊಡಕಾಗಿದೆ. ನಿಜವಾಗಿಯೂ ಸರ್ಕಾರ ಪುಸ್ತಕೋದ್ಯಮಕ್ಕೆ ಸಹಾಯ ಮಾಡಬೇಕಿದ್ದರೆ ಎಲ್ಲ ಸಗಟು ಖರೀದಿ ಮತ್ತು ಸಬ್ಸಿಡಿ ಹಣವನ್ನು ಪುಸ್ತಕಗಳ ವ್ಯಾಪಕ ವಿತರಣೆ ಮತ್ತು ಮಾರಾಟ ಜಾಲ ನಿರ್ಮಿಸಲು ವ್ಯಯ ಮಾಡಿದರೆ ಉದ್ಯಮ ತನ್ನ ಕಾಲ ಮೇಲೆ ತಾನು ನಿಲ್ಲುವಂತಾದೀತು. ಎಲ್ಲ ಸರ್ಕಾರಿ ಅನುದಾನಿತ ಪ್ರಕಾಶನ ಸಂಸ್ಥೆಗಳು ಲಾಭ ಗಳಿಸದಿದ್ದರೂ ಯಾವ ನಷ್ಟವನ್ನೂ ಅನುಭವಿಸದಂತಹ full cost pricing ಪದ್ಧತಿಯನ್ನು ಆಧಾರವಾಗಿಟ್ಟುಕೊಂಡು ಪುಸ್ತಕಗಳಿಗೆ ಬೆಲೆ ನಿಗದಿಪಡಿಸಿ ಮಾರಾಟ ಮಾಡಬೇಕು ಎನ್ನುವುದೂ ಬಹಳ ಮುಖ್ಯ. ಉದ್ಯಮವು ಪ್ರಚಾರ ಮತ್ತು ಪುಸ್ತಕಗಳ ರವಾನೆ ವೆಚ್ಚ ಭರಿಸಲಾಗದ ಸ್ಥಿತಿ ತಲುಪಿರುವುದರಿಂದ ಪ್ರಚಾರ ಮತ್ತು ವಿತರಣೆಯಲ್ಲಿ ಸರ್ಕಾರದ ನೆರವು ಹೆಚ್ಚು ಅಗತ್ಯ. ಗ್ರಂಥಾಲಯಗಳು, ಶಾಲಾಕಾಲೇಜುಗಳು ಮತ್ತು ಇತರ ಸಂಸ್ಥೆಗಳು ಸ್ಥಳೀಯ ಮಾರಾಟಗಾರರಿಂದ ಪುಸ್ತಕಗಳನ್ನು ಕೊಳ್ಳುವುದರಿಂದ ಪಠ್ಯೇತರ ಪುಸ್ತಕಗಳ ಚಿಲ್ಲರೆ ಮಾರಾಟ ವೃದ್ಧಿಯಾಗುತ್ತದೆ ಮತ್ತು ಪಠ್ಯಪುಸ್ತಕ ಮಾರಾಟಗಾರರನ್ನು ಆಕರ್ಷಿಸಿದಂತಾಗುತ್ತದೆ. ಕೇಂದ್ರೀಕೃತ ಸಗಟು ಖರೀದಿ ವ್ಯವಸ್ಥೆಯು ಸ್ಥಳೀಯ ಚಿಲ್ಲರೆ ಮಾರಾಟಗಾರರು ಪಠ್ಯೇತರ ಪುಸ್ತಕಗಳನ್ನು ಮಾರಾಟ ಮಾಡದಂತಹ ಪರಿಸ್ಥಿತಿ ನಿರ್ಮಿಸಿದೆ. ಈಗ ಪ್ರಕಾಶಕರು ಸಗಟು ಖರೀದಿಗೆ ಪುಸ್ತಕಗಳನ್ನು ಒದಗಿಸಿ ತಮ್ಮ ಪುಸ್ತಕಗಳ ಚಿಲ್ಲರೆ ಮಾರಾಟಗಾರರನ್ನು ತಾವೇ ಅಧೈರ್ಯಗೊಳಿಸಿ ದೂರವಿರಿಸಿದಂತಾಗಿದೆ. ಅಲ್ಲದೆ ಇತರ ಸರಕು ಮಾರಾಟದಲ್ಲಿ ದೊರಕುವಂತೆ ಪುಸ್ತಕ ಮಾರಾಟದಿಂದಲೂ ಗರಿಷ್ಠ ಲಾಭ ದೊರಕುವುದಾದರೆ ಚಿಲ್ಲರೆ ಮಾರಾಟಗಾರರು ಮುಂದೆ ಬಂದಾರು.

*ತಮಿಳಿನಲ್ಲಿ ಪ್ರತಿ ವರ್ಷ ಮಾರಾಟಕ್ಕೆ ಬಿಡುಗಡೆ ಮಾಡುವ ಪ್ರತಿಗಳ ಸಂಖ್ಯೆ ಕನ್ನಡದಲ್ಲಿ ಮಾರಾಟಕ್ಕೆ ಬಿಡುಗಡೆಯಾಗುವ ಪ್ರತಿಗಳ ೨೦ ಪಟ್ಟು ಹೆಚ್ಚಿರುತ್ತದೆ. ಗ್ರಂಥಾಲಯಗಳು, ಶಾಲಾಕಾಲೇಜುಗಳು ಮತ್ತು ಇತರ ಸಂಸ್ಥೆಗಳು ಸ್ಥಳೀಯ ಮಾರಾಟಗಾರರಿಂದ ಪುಸ್ತಕಗಳನ್ನು ಕೊಳ್ಳುವುದರಿಂದ ಪಠ್ಯೇತರ ಪುಸ್ತಕಗಳ ಚಿಲ್ಲರೆ ಮಾರಾಟ ವೃದ್ಧಿಯಾಗುತ್ತದೆ ಮತ್ತು ಪಠ್ಯಪುಸ್ತಕ ಮಾರಾಟಗಾರರನ್ನು ಆಕರ್ಷಿಸಿದಂತಾಗುತ್ತದೆ.*

---

* *ಕನ್ನಡ ಪ್ರಭ,* ಏಪ್ರಿಲ್ ೩೦, ೨೦೦೪, ಪು. ೬.

## ಲೇಖಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೬ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ

ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು ೪ ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **;** **Phone:** 91-80-25084451; **Fax:** 91-80-25084476.